

ಪ್ರದರ್ಶನವನ್ನು ಅಂತ್ಯದಲ್ಲಿಯೇ ಇಟ್ಟುಕೊಂಡಿರುತ್ತಾರೆ. ಅಥವಾ ಇತರ ಕಲಾವಿದರು ತಮ್ಮ ಪ್ರದರ್ಶನವನ್ನು ಕಥಕಳಿಗಿಂತ ಮೊದಲೇ ಇಡುವಂತೆ ಕೇಳಿಕೊಳ್ಳುತ್ತಾರೆ.

ಶಾಸ್ತ್ರೀಯ ಕಲೆಗಳು ಎಂದು ಗುರುತಿಸಿಕೊಂಡ ಕಲೆಗಳೆಲ್ಲ ಹೆಚ್ಚಾಗಿ ಜನಪದದ ಹಿನ್ನೆಲೆಯಿಂದಲೇ ತಮ್ಮ ಪಯಣವನ್ನು ಆರಂಭಿಸಿರುತ್ತವೆ. ಕಥಕಳಿಯೂ ಹಾಗೆಯೇ. ಇದೊಂದು ಅತ್ಯುತ್ತಮವಾಗಿ ಶೈಲೀಕರಿಸಿದ, ದಕ್ಷಿಣ ಭಾರತದ ಸಾಂಪ್ರದಾಯಿಕ ನೃತ್ಯ ನಾಟಕ. ಶಾಸ್ತ್ರೀಯ ಕಲೆ ಎಂಬ ಪರಿಕಲ್ಪನೆ ಪಾಶ್ಚಾತ್ಯರಿಂದ ಬಂದಿದ್ದಾದರೂ, ನಮ್ಮ ದೇಶದಲ್ಲಿ ಎಂಟು ಶಾಸ್ತ್ರೀಯ ಕಲಾಪ್ರಕಾರಗಳಿವೆ ಎಂಬುದು ಹೆಮ್ಮೆಯ ವಿಷಯ. ಜಗತ್ತಿನ ಯಾವ ದೇಶದಲ್ಲಿಯೂ ಒಂದು ಅಥವಾ ಎರಡಕ್ಕಿಂತ ಹೆಚ್ಚು ಕಲಾಪ್ರಕಾರಗಳು ಶಾಸ್ತ್ರೀಯ ಎಂದು ಪರಿಗಣಿತವಾಗಿಲ್ಲ. ನಮ್ಮ ದೇಶದಲ್ಲೋ ಎಂಟು ಕಲಾಪ್ರಕಾರಗಳ ಬಳಿಕ ಇನ್ನಷ್ಟು ಕಲಾಪ್ರಕಾರಗಳು ಅರ್ಹತೆಗಾಗಿ ಸರತಿಯಲ್ಲಿವೆ. ಈ ಕಲಾಶ್ರೀಮಂತಿಕೆಯ ಬಗ್ಗೆ ನಾವು ಹೆಮ್ಮೆಪಡಬೇಕು.

ಶಾಸ್ತ್ರೀಯ ಕಲಾಪ್ರಕಾರಗಳು ಜನಪದದ ಹಿನ್ನೆಲೆಯಿಂದ ಬಂದರೂ ಅವು ನಾಟ್ಯಶಾಸ್ತ್ರ ಹೇಳುವ ನಿಯಮಗಳಿಗೆ ತಕ್ಕಂತೆ ಇವೆ. ನಾಟ್ಯಶಾಸ್ತ್ರವನ್ನು ಓದದೇ ಇರುವ ಕಲಾವಿದನೂ ಅದರ ಪ್ರಕಾರವೇ ಹೆಜ್ಜೆ ಹಾಕಬಲ್ಲ ಎಂದರೆ ಈ ಕ್ಷೇತ್ರದಲ್ಲಿ ಅಂತರ್ಗತವಾಗಿರುವ ಕಲಾಜ್ಞಾನ ಎಷ್ಟು ಭದ್ರವಾದುದು ಎಂದು ಅರ್ಥಮಾಡಿಕೊಳ್ಳಬಹುದು. ಕಥಕಳಿಯಲ್ಲಿ ಆಹಾರ್ಯ ಅಭಿನಯವೂ ಸೇರಿಕೊಂಡಿರುತ್ತದೆ. ಅಭಿನಯವೆಂದರೆ ಸಂವಹನ ಎಂದು ಒಪ್ಪುವುದಾದರೆ, ಕಥಕಳಿಯ ವೇಷಗಾರಿಕೆಯ ರೀತಿನೀತಿಯೇ ವೇಷದ ಸ್ವಭಾವವನ್ನು ವ್ಯಕ್ತಪಡಿಸುತ್ತದೆ. ಭೀಮನೋ, ದುಶ್ಯಾಸನನೋ, ಕೃಷ್ಣನೋ, ಹನುಮನೋ ಎಂಬುದನ್ನು ಪ್ರೇಕ್ಷಕರು ನೋಡುತ್ತಲೇ ಅರ್ಥಮಾಡಿಕೊಳ್ಳುತ್ತಾರೆ.